ಅಸಲು ದಾವೆ ಸಂಖ್ಯೆ -168/2015
ಡಿ.ಡಬ್ಲ್ಯೂ - 04
ದಿನಾಂಕಃ 26-08-2025
ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ. ಕೆ ಸಿ ಪಿ ವಕೀಲರಿಂದ**

ನನಗೆ ಓದಲು ಮತ್ತು ಬರೆಯಲು ಬರುವುದಿಲ್ಲ. ನೀವು ಸಲ್ಲಿಸಿದ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ಯಾರು ನೀಡಿದರು ಎಂದರೆ ನಾನೇ ನೀಡಿರುತ್ತೇನೆ. ಯಾವ ದಿನ, ತಿಂಗಳು, ವರ್ಷ ಎಂದು ಹೇಳಲು ಆಗುತ್ತದೆಯಾ ಎಂದರೆ ಇಲ್ಲ. ಎಷ್ಟು ವರ್ಷದ ಹಿಂದೆ ನೀಡಿದ್ದೀರಿ ಎಂದರೆ 18-20 ವರ್ಷದ ಹಿಂದೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆದರೆ ನನಗೆ ನೆನಪಿಲ್ಲ. ಈ ದಾವೆಯ ಬಗ್ಗೆ ನಿಮಗೆ ಮಾಹಿತಿ ಇದೆಯಾ ಎಂದರೆ ಇರುವುದಿಲ್ಲ. ಈ ದಾವೆಯನ್ನು ಯಾರು ಯಾರ ಮೇಲೆ ಯಾವ ಕಾರಣಕ್ಕಾಗಿ ಹೂಡಿದ್ದಾರೆ ಎಂದು ವಾದಿ ಮತ್ತು ಪ್ರತಿವಾದಿಯರನ್ನು ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಈ ದಾವೆಯಲ್ಲಿ ದಾವಾದ ಆಸ್ತಿಯನ್ನು ನೀವು ನೋಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ದಾಖಲಾತಿಗಳನ್ನು ಏನಾದರೂ ನೋಡಿದ್ದೀರಾ ಎಂದರೆ ಇಲ್ಲ ಎಂದು ನುಯುತ್ತಾರೆ.

ಶಹಜಾನ ನದಾಫ ರವರನ್ನು ನೀವು ನೋಡಿದ್ದೀರಾ ಎಂದರೆ ನೋಡಿದ್ದೆನೆ. ಪ್ರತಿವಾದಿಗೆ ಅವರು ಏನಾಗಬೇಕು ಎಂದರೆ ಅಣ್ಣನಾಗಬೇಕು. ದಾವಾ ಆಸ್ತಿಯ ಸಂಖೆಃ ಎಷ್ಟು ಎಂದರೆ 210 ಇರುತ್ತದೆ. ಒಂದೇ ಆಸ್ತಿಯೋ ಅಥವಾ ಎಷ್ಟು ಆಸ್ತಿ ಇದೆ ಎಂದರೆ ಒಂದೇ ಆಸ್ತಿ ಇದೆ. ದಾವಾ ಆಸ್ತಿಯ ಚಕ್ಕಬಂದಿ ಹೇಳಲು ಆಗುತ್ತದೆಯಾ ಎಂದರೆ ಪೂರ್ವಕ್ಕೆಃ ಸರಕಾರಿ ಹಾಳು ಬಾಳಿ, ಪಶ್ಚಿಮಕ್ಕೆಃ ಲಾಡಸಾಬ ರವರ ಮನೆ, ಉತ್ತರಕ್ಕೆಃ ಸರಕಾರಿ ರಸ್ತೆ, ದಕ್ಷಿಣಕ್ಕೆ ಃ ಸರಕಾರಿ ರಸ್ತೆ.

ದಾವಾ ಆಸ್ತಿಯು ಎಷ್ಟು ಉದ್ದ ಮತ್ತು ಅಗಲ ಇದೆ ಎಂದರೆ ನನಗೆ ಗೊತ್ತಿಲ್ಲ. ನೀವೆನಾದರೂ ಅಥಾವಾ ನಿಮ್ಮ ಸಮಕ್ಷಮದಲ್ಲಿ ಯಾರಾದರೂ ಅಳತೆ ಮಾಡಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಚಮನಸಾಬ ನದಾಫನು ದಾವಾ ಆಸ್ತಿಯನ್ನು ಶಹಜಾನ ನದಾಫ ರವರಿಗೆ ಹಕ್ಕು ಬಿಟ್ಟ ಪತ್ರ ಮುಖಾಂತರ ಕೊಟ್ಟಿದ್ದಾರೆ ಎಂದು ನಿವೇನಾದರೂ ಬರೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಚಮನಸಾಬ

ನದಾಫ ರವರು  ಪಿರಾಂಬಿ ಎಷ್ಟು ಆಸ್ತಿ ಬಿಟ್ಟು ಕೊಟ್ಟಿದ್ದಾರೆ  ಎಂದು ನಿವೇನಾದರೂ ಬರೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ಪಿರಾಂಬಿ ಎಂದರೆ 1 ನೇ ಪ್ರತಿವಾದಿಯ  ಹೆಂಡತಿ ಎಂದರೆ ಸರಿ. ಚಮನಸಾಬ ನದಾಫ ರವರು  2ನೇ ಪ್ರತಿವಾದಿಗೆ  ಎಷ್ಟು ಆಸ್ತಿ ಬಿಟ್ಟು ಕೊಟ್ಟಿದ್ದಾರೆ  ಎಂದು ನಿವೇನಾದರೂ ಬರೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ನೀವು ನಿಡಿ- 18, 19 ಮತ್ತು 20 ರಲ್ಲಿ ತಮ್ಮ ಸಹಿಗಳನ್ನು ನೋಡಿ ಗುರುತಿಸಿದ್ದು ಅದರಲ್ಲಿ ಮೊದಲು ಯಾವ ದಾಖಲೆ ಮಾಡಿರುತ್ತಾರೆ ಮತ್ತು ಅದರಲ್ಲಿ ನೀವು ಎಷ್ಟು  ಕಾಗದ ಪತ್ರಗಳಿಗೆ ಸಹಿಗಳನ್ನು ಮಾಡಿರುತ್ತೀರಿ ಎಂದರೆ ಮೊದಲು ಚಮನಸಾಬ ರವರು ಶಹಜಾನಗೆ ಬಿಟ್ಟು ಕೊಟ್ಟ ಪತ್ರಕ್ಕೆ ಸಹಿ ಮಾಡಿರುತ್ತೇನೆ ನಂತರ ಕಬೀರಸಾಬನ ಪತ್ರಕ್ಕೆ ಸಹಿ ಮಾಡಿರುತ್ತೇನೆ. ಎಷ್ಟು ವರ್ಷದ ಹಿಂದೆ ಮೊದಲ ದಾಖಲೆ ಮೇಲೆ ಸಹಿ ಮಾಡಿದ್ದೀರಿ ಎಂದರೆ ಅಂದಾಜು 20-25 ವರ್ಷದ ಹಿಂದೆ ಮಾಡಿದ್ದೇನೆ.  ಆ ಸಮಯದಲ್ಲಿ ಯಾವುದಾದರೂ ಹಬ್ಬ ಇತ್ತಾ ಅಥವಾ ದಿನಾಂಕ, ತಿಂಗಳು ಹೇಳಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.  1 ನೇ ದಾಖಲಾತಿಯು ಅಂದರೆ ಶಹಜಾನ ನದಾಫರವರಿಗೆ ಬರೆದುಕೊಟ್ಟ ದಾಖಲೆಯು ಯಾವ ರೀತಿಯ ದಾಖಲೆ ಇತ್ತು ಎಂದರೆ  ಅದು ನನಗೆ ಗೊತ್ತಿಲ್ಲ. ಆದರೆ ಆ ವೇಳೆಯಲ್ಲಿ ನಾನು ಇದ್ದೇನು. ಸದರಿ ದಾಖಲೆಯನ್ನು ಭದ್ರತೆಗಾಗಿ ಮಾಡಿದ್ದು ಅದರ  ಮೇಲೆ  ನಾನು ಸಹಿ ಮಾಡಿರುತ್ತೇನೆ. ಭದ್ರತೆಯನ್ನು ಹಣ ಕೊಟ್ಟಿದ್ದರ ಸಲುವಾಗಿ ಮಾಡಿರುತ್ತಾರೆಯೇ ಎಂದರೆ ಹೌದು ಎಂದು ನುಡಿಯುತ್ತಾರೆ.  ಎಷ್ಟು ಹಣಕ್ಕೆ ಭದ್ರತೆಯನ್ನು ನೀಡಿದರು ಎಂದರೆ ರೂ. 19,000/- ಕ್ಕೆ ನೀಡಿರುತ್ತಾರೆ. ಹಣವನ್ನು ಯಾರು ಯಾರಿಗೆ ನೀಡಿದರು ಎಂದರೆ  ಹಜರೆಸಾಬ ರವರು ಚಮನಸಾಬ ರವರಿಗೆ ನೀಡಿದರು.  ಯಾರು ಯಾರ ಮುಂದೆ ಹಣವನ್ನು ನೀಡಿರುತ್ತಾರೆ ಎಂದರೆ ಕಾಗದದ  ಮೇಲೆ ಸಹಿ ಮಾಡಿದವರ ಮುಂದೆ ನೀಡಿರುತ್ತಾರೆ.

ಸಾಕ್ಷಿಗೆ  ನಿಡಿ- 20 ನ್ನು ತೋರಿಸಿದ್ದು, ನೀವು ಈ ಮೇಲೆ ಹೇಳಿದ ವ್ಯವಹಾರವು ಈ ಕಾಗದದ ಮೇಲೆ ಆಗಿರುತ್ತದೆಯಾ ಎಂದರೆ ಸರಿ. ನಿಡಿ- 20 ನ್ನು ಯಾರು, ಎಲ್ಲಿ ಬರೆಸಿದ್ದರು ಎಂದರೆ ಹಣವನ್ನುನೀಡಿದ ಬಳಿಕ ಚಮನಸಾಬ ರವರು ಸವಣೂರಿಗೆ ಬಂದು ಬರೆಸಿರುತ್ತಾರೆ. ಸದರಿ ನಿಡಿ- 20 ನ್ನು ಕೈಯಿಂದ ಬರೆದಿದ್ದಾರೋ ಅಥವಾ ಬೆರಳಚ್ಚು, ಗಣಕಯಂತ್ರದಲ್ಲಿ ಟೈಪ ಮಾಡಿದ್ದಾರೋ ಎಂದರೆ  ನನಗೆ ಗೊತ್ತಿಲ್ಲ.  ನಿಡಿ- 20 ನ್ನು ಬರೆಸಿದ ಬಳಿಕ ನೀವು ಓದಿ ಅಥವಾ

ಓದಿಸಿ ತಿಳಿದುಕೊಂಡಿದ್ದೀರಾ ಎಂದರೆ ಓದಿಸಿ ತಿಳಿದುಕೊಂಡಿರುತ್ತೇನೆ. ನೀವು ಹೇಳಿದ ಹಾಗೆ ರೂ. 19,000/- ನ್ನು ಭದ್ರತೆಗಾಗಿ ನೀಡಿದ್ದಾರೆ ಎಂದು ಎಲ್ಲಿಯೂ ಇಲ್ಲ ಎಂದರೆ ಅವರು ಬರೆಸಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ನಿಡಿ- 18 ರಿಂದ 20 ರಲ್ಲಿ ನಿಮ್ಮ ಸಹಿಯನ್ನು ಬಿಟ್ಟು ಬೇರೆಯವರ ಸಹಿಗಳನ್ನು ನೀವು ಗುರುತಿಸಲು ಆಗುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಮುಂದುವರೆದು ಲಾಡಸಾಬ ತಂದೆ ಚಮನಸಾಬ ನದಾಫ ರವರ ಸಹಿ ಗುರುತಿಸುತ್ತೇನೆ. ನಿಡಿ- 18 ಮತ್ತು 19 ನ್ನು ಯಾರು ಬರೆಸಿರುತ್ತಾರೆ ಎಂದರೆ ಚಮನಸಾಬ ನದಾಫರವರು ಬರೆಸಿರುತ್ತಾರೆ. ಯಾವ ವಕೀಲರ ಮುಖಾಂತರ ಬರೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಎಷ್ಟು ವರ್ಷದ ನಿಡಿ- 18 ಮತ್ತು 19 ನ್ನು ಬರೆಸಿರುತ್ತಾರೆ ಎಂದರೆ 18 ವರ್ಷದ ಹಿಂದೆ ಬರೆಸಿರುತ್ತಾರೆ. ಸದರಿ ನಿಡಿ- 18 ಮತ್ತು 19 ನ್ನು ಬಾಂಡ ಪೇಪರ ನಲ್ಲಿ ಬರೆದಿದ್ದಾರೊ ಅಥವಾ ಬಿಳಿ ಹಾಳೆಯ ಮೇಲೆ ಬರೆದಿದ್ದಾರೋ ಎಂದು ನಿಮಗೆ ಮಾಹಿತಿ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಅದರಲ್ಲಿ ಏನು ಬರೆದಿದ್ದಾರೆ ಎಂದು ಹೇಳಲು ಆಗುತ್ತದೆಯಾ ಎಂದರೆ ನೆನೆಪಿಲ್ಲ ಎಂದು ನುಡಿಯುತ್ತಾರೆ.

ನಿಡಿ- 18 ಮತ್ತು 19 ಬರೆಯುವ ವೇಳೆಯಲ್ಲಿ ಹಣವನ್ನು ಕೊಡುವುದು ಮತ್ತು ತೆಗೆದುಕೊಳ್ಳುವುದು ಏನಾದರೂ ನಡೆಯಿತಾ ಎಂದರೆ ನಡೆದಿರುತ್ತದೆ. ಯಾರು ಹಣವನ್ನು ಕೊಟ್ಟರು ಮತ್ತು ಯಾರು ತೆಗೆದುಕೊಂಡರು ಎಂದರೆ ಹಜರೆಸಾಬ ರವರು ಚಮನಸಾಬ ರವರಿಗೆ ಎರಡು ಕಾಗದದ ನಡುವೆ ರೂ. 10,000/- ಗಳನ್ನು ನೀಡಿರುತ್ತಾರೆ. ಸದರಿ ರೂಗಳನ್ನು ಯಾವ ಕಾರಣಕ್ಕಾಗಿ ನೀಡಿದರು ಎಂದರೆ ಚಮನಸಾಬ ರವರು 3 ಗುಂಟೆ ಪ್ಲಾಟಗೆ ಸಂಭಂದಿಸಿದಂತೆ ಕೊಟ್ಟಿರುತ್ತಾರೆ. ಇದು ಖರೀದಿ ವ್ಯವಹಾರ ಆಗಿರುತ್ತದೆ. ಈ ಖರೀದಿ ವ್ಯವಹಾರವು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಆಗಿರುತ್ತದೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ.

ಸಾಮಾನ್ಯವಾಗಿ ಖರೀದಿ ಆಗಬೇಕೆಂದರೆ ಅದು ನೊಂದಣಿ ಆಗಬೇಕು ಎಂದರೆ ಸರಿ. ನಿಡಿ- 18 ರಿಂದ 20 ದಾಖಲೆಗಳು ಏನಾದರೂ ನೊಂದಣಿ ಆಗಿದ್ದೀಯಾ ಇಲ್ಲ ಎಂದು ನುಡಿಯುತ್ತಾರೆ. ಅಣ್ಣತಮ್ಮಂದಿರ ನಡುವೆ ಆಸ್ತಿಯನ್ನು ಹಕ್ಕು ಬಿಟ್ಟಪತ್ರದ ಮುಖಾಂತರ ಬಿಟ್ಟು ಕೊಟ್ಟರೆ ಏನು ಆಗುವುದಿಲ್ಲ ಎಂದು ನಾವು ನುಡಿದಿರುತ್ತವೆ. ನಿಡಿ- 18 ರಿಂದ 20 ರನ್ನು ಮಾಡುವ ವೇಳೆಯಲ್ಲಿ ನೊಂದಣಿ ಅಧಿಕಾರಿಗಳ ಮುಂದೆ ಅಥವಾ ವಕೀಲರ ಮುಂದೆ ಹೋಗಿ ನೀವೆನದಾರೂ ಅಥವಾ ಈ ಕಾಗದದಲ್ಲಿ ಕಂಡುಬರುವ ಉಳಿದ ವ್ಯಕ್ತಿಗಳು ಏನಾದರೂ

ಕಾನೂನು ಸಲಹೆ ಪಡೆದಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಖರೀದಿಪತ್ರಗಳು ಮತ್ತು ಹಕ್ಕು ಬಿಟ್ಟ ಪತ್ರಗಳು ನೊಂದಣಿ ಆಗಬೇಕು ಎಂದರೆ ಸರಿ.

ನಿಡಿ- 18 ರಿಂದ 20 ರಲ್ಲಿ ಆಸ್ತಿಯ ಕಬ್ಜೆಯನ್ನು ಇಂದೆ ಬಿಟ್ಟು ಕೊಡಲಾಗಿದೆ ಎಂದು ಬರೆದಿದ್ದಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಡಿ- 18 ರಿಂದ 20 ನ್ನು ಚಮನಸಾಬ ರವರು ಬರೆಸಿದಿದ್ದಾರೆ ಎಂದು ಸುಳ್ಳು ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಲಾಡಸಾಬ್ ಮತ್ತು ನೀವು ಗೆಳೆಯರು ಎಂದರೆ ಸರಿ. ಇಬ್ಬರಿಗೂ ತೊಂದರೆಯಾದಾಗ ಪರಸ್ಪರವಾಗಿ ಸಹಾಯ ಮಾಡಿರುತ್ತೀರಿ ಎಂದರೆ ಕೆಲವೊಮ್ಮೆ ಮಾಡಬಹುದು. ನೀವು ಮಾಡುತ್ತೀರಾ ಎಂದರೆ ನಾನು ಮಾಡುತ್ತೇನೆ. ಚಮನಸಾಬ ತಂದೆ ಪೀರಸಾಬ ನದಾಫ ರವರು ಗ್ರಾಮ ಪಂಚಾಯತಿ ಸದಸ್ಯರು ಇದ್ದು ಅವರು ಎಷ್ಟು ವರ್ಷ ಸದಸ್ಯರಾಗಿದ್ದರು ಎಂದರೆ 5 ವರ್ಷ ಆಗಿದ್ದರು. ಅವರು ಹೆಸರು ಚೆನ್ನಾಗಿತ್ತು ಎಂದರೆ ಸರಿ. ಪಂಚಾಯತಿಯಲ್ಲಿ ಪ್ರತಿವಾದಿಯರ ಹೆಸರನ್ನು ದಾಖಲಿಸಿ ಕೊಡುತ್ತೇನೆ ಎಂದು ಏನಾದರೂ ನೀವು ಬರೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ನಿಮಗೂ ಮತ್ತು ಪ್ರತಿವಾದಿಯರಿಗೂ ಗೊತ್ತಾಗದ ಹಾಗೆ ವಾದಿಯರು ಮೋಸ ಮತ್ತು ವಂಚನೆ ಮಾಡುವ ಉದ್ದೇಶದಿಂದ ತಮ್ಮ ಹೆಸರನ್ನು ದಾಖಲಿಸಿದ್ದಾರೆ ಎಂದು ನೀವೆನಾದರೂ ಬೆರಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಆದರೆ ಸೊಸೆ ಮತ್ತು ಮಗಳ ಹೆಸರಲ್ಲಿ ದಾಖಲು ಮಾಡಿದ್ದಾರೆ. ನಿಮಗೆ ಯಾವಾಗ ತಿಳಿಯಿತು ಎಂದರೆ ಕೋರ್ಟಗೆ ಬಂದಾಗ ತಿಳಿದಿರುತ್ತದೆ. ಈ ದಾವೆಯಲ್ಲಿ ನ್ಯಾಯಾಲಯದಿಂದ ಸಾಕ್ಷಿ ಹೇಳಲು ಸಮನ್ಸ ಬಂದಾಗಲೇ ನಿಮಗೆ ಎಲ್ಲಾವಿಷಯ ತಿಳಿದಿರುತ್ತದೆ ಎಂದರೆ ಸರಿ. ನಿಮ್ಮ ಸಮಕ್ಷಮದಲ್ಲಿ ಅಳತೆ ಮಾಡಿ ಕಬ್ಜಾ ಕೊಡುವುದು ಮತ್ತು ತೆಗೆದುಕೊಳ್ಳುವುದು ಏನಾದರೂ ನಡೆದಿದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ವಾದಿಯರ ಕಬ್ಜಾ ವಹಿವಾಟಿಯಲ್ಲಿ ಇದೆ ಎಂದರೆ ದಾಖಲೆಗಳಲ್ಲಿ ಅವರ ಹೆಸರು ಇದೆ ಆದರೆ ಪ್ರತ್ಯಕ್ಷವಾಗಿ ಅವರು ಕಬ್ಜಾದಲ್ಲಿ ಇರುವುದಿಲ್ಲ. ಕಾಗದದಲ್ಲಿ ಅವರ ಹೆಸರು ಇದೆ ಎಂದು ನಿಮಗೆ ಹೇಗೆ ಗೊತ್ತಾಯಿತು ಎಂದರೆ ನೀವು ಈಗ ಹೇಳಿದಾಗ ನನಗೆ ಗೊತ್ತಾಗಿರುತ್ತದೆ. ಸದರಿ ವಿಷಯವನ್ನು ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ.

ದಾವಾ ಆಸ್ತಿಯಲ್ಲಿ ಪ್ರತಿವಾದಿಯರು ಕೃಷಿ ಸಲಕರಣೆಗಳು ಇಟ್ಟುಕೊಂಡು ತಿಪ್ಪೆ ಬಣವೆ

ಹಾಕಿಕೊಂಡು ಇದ್ದಾರೆ ಎಂದು ಬರೆಸಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ಆಸ್ತಿಯಲ್ಲಿ ಮತ್ತೆ ಏನಾದರೂ ಇದೆ ಎಂದು ನೀವು ಬರೆಸಿದ್ದೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಸದರಿ ಆಸ್ತಿಯಲ್ಲಿ ತಿಪ್ಪೆ ಬಣವೆ ಇದೆ ಎಂದು ತೋರಿಸಲು ಏನಾದರೂ ದಾಖಲೆ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಮತ್ತು ಲಾಡಸಾಬ ರವರು ಮಿತ್ರರಿರುವುದರಿಂದ ದಾವಾ ಆಸ್ತಿಯ ಕೃಷ್ಪಿ ಸಲಕರಣೆ, ತಿಪ್ಪೆ ಬಣವೆ ಇದೆ ಎಂದು ಪ್ರತಿವಾದಿಯರಿಗೆ ಅನುಕೂಲ ವಾಗುವಂತೆ ನುಡಿಯತ್ತಿದ್ದೀರಿ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಪ್ರತಿವಾದಿಯು ಕಬ್ಜಾದಲ್ಲಿ ಇದ್ದಾರೆ ಎಂದು ಸುಳ್ಳು ನುಡಿಯುತ್ತೀದ್ದೀರಿ ಎಂದರೆ ಸರಿಯಲ್ಲ. ನಿಮಗೆ ಯಾವುದೇ ಮಾಹಿತಿ ಇಲ್ಲದೆ ಇದ್ದರು ಪ್ರತಿವಾದಿಯರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ. ಹೆ. ಕೆ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂಡಾಧಿಕಾರಿಗಳು.ಸವಣೂರು.